# ‘ನಾನು ನಾನೇ’ ಎಂದುಕೊಂಡ ಮಹಾಭಕ್ತ

ಅವರು ಹಟಕ್ಕೆ ಬಿದ್ದರೆ, ಅಲವತ್ತುಕೊಂಡರೆ, ದುಃಖಿಸತೊಡಗಿದರೆ ಅಗಲವಾದ ಮೂಗಿನ ಹೊಳ್ಳೆಗಳು ಇನ್ನೂ ಚಪ್ಪಟೆಯಾಗುತ್ತವೆ. ಪಿಳಪಿಳಾಯಿಸುವ ಕಣ್ಣುಗಳಲ್ಲಿ ತಂತಾನೇ ನೀರು. ‘ನಾನು ಹೋದರೆ ಹೋದೇನು’ ಎಂಬ ತತ್ವ ಅವರಿಗೆ ಅನ್ವಯವಾಗುವುದಿಲ್ಲ. ಅವರು ‘ನಾನು ನಾನೇ’ ಎನ್ನುವವರ ಪೈಕಿ. ತಮ್ಮ ಕುಳ್ಳಗಿನ ದೇಹದ ಮೇಲೆ ಅಪಾರ ಅಭಿಮಾನ. ತಮ್ಮ ನಿರ್ಮಾಣ ಸಂಸ್ಥೆಯ ಲಾಂಛನವನ್ನು ಅವರು ರೂಪಿಸಿರುವ ರೀತಿಯೂ ಗಮನಾರ್ಹ.

ಚಿಕ್ಕಂದಿನಿಂದಲೂ ಅವರು ಶೋಕಿಲಾಲ. ಮದ್ರಾಸ್‌ನಲ್ಲಿ ಸಿನಿಮಾ ಉದ್ಯಮ ನೆಲೆಗೊಂಡಿದ್ದಾಗಲೇ ಚುರುಕುಗೊಂಡಿದ್ದವರು ಅವರು. ಸ್ಟಾರ್‌ಗಳ ಕಾಲ್‌ಷೀಟ್ ಹಿಡಿಯುವುದರಲ್ಲಿ ಒಂದು ಕಾಲದಲ್ಲಿ ನಿಸ್ಸೀಮರಾಗಿದ್ದ ಅವರು, ಈಗ ಆ ಫಾರ್ಮ್ ಕಳೆದುಕೊಂಡಿದ್ದಾರೆ. ಹಣ ಹೂಡುವುದು, ಲಾಭ ಪಡೆಯುವುದು, ನಷ್ಟದ ಬಾಬತ್ತನ್ನು ಹೇಳಿಕೊಂಡು ಕೊರಗುವುದು ಹವ್ಯಾಸ. ಹಾಗಿದ್ದೂ ಸಿನಿಮಾ ಮಾಡುವುದನ್ನು ನಿಲ್ಲಿಸುವುದಿಲ್ಲ. ಬೇರೆ ಭಾಷೆಯ ಯಾವುದೋ ಸಿನಿಮಾ ಇಷ್ಟವಾಯಿತೆಂದರೆ ಗಬಕ್ಕನೆ ಅದನ್ನು ಹಿಡಿದು ತಂದು, ಕನ್ನಡದಲ್ಲಿ ರೀಮೇಕಿಸುವ ಕೌಶಲದಲ್ಲಿ ಅವರನ್ನು ಮೀರಿಸಿದವರು ವಿರಳ. ಯಾವ ಭಾಷೆಯ, ಯಾವ ಚಿತ್ರವನ್ನು, ಯಾವ ಚಿತ್ರಮಂದಿರದಲ್ಲಿ ನೋಡಿದಾಗ ಅದನ್ನು ರೀಮೇಕ್ ಮಾಡಬೇಕು ಎನಿಸಿತು ಎಂಬುದನ್ನು ಸಂದರ್ಭೋಚಿತವಾಗಿಯೂ ಚಿತ್ರವತ್ತಾಗಿಯೂ ಬಣ್ಣಿಸುವಷ್ಟು ನೆನಪಿನ ಶಕ್ತಿ ಈ ಇಳಿ ವಯಸ್ಸಿನಲ್ಲೂ ಅವರಿಗೆ ಇದೆ.

ಯಾವ ಚಿತ್ರದ ಕಲೆಕ್ಷನ್ ವಾರದ ಯಾವ ಯಾವ ದಿನ ಎಷ್ಟೆಷ್ಟಿದೆ ಎಂಬುದನ್ನು ಅಂಗೈ ಅಗಲದ ತಮ್ಮ ಮೊಬೈಲ್ ಮೂಲಕವೇ ಕಾಲಕಾಲಕ್ಕೆ ತಿಳಿದುಕೊಳ್ಳುತ್ತಿರುತ್ತಾರೆ. ದೀರ್ಘ ಕಾಲದಿಂದ ಇರುವ ತಮ್ಮ ಅಭಿಮಾನಿ ಬಳಗ ದೂರವಾಗದಂತೆ ನೋಡಿಕೊಳ್ಳುವ ಕಲೆಯೂ ಅವರಿಗೆ ಗೊತ್ತು. ಅವರ ಜನ್ಮದಿನ ಆ ಅಭಿಮಾನಿ ಬಳಗ ಮನೆಮುಂದೆ ಕಟೌಟ್ ಹಾಕಿದರೆ, ಮೊದಲೇ ಅಗಲವಾಗಿರುವ ಮುಖ ಇನ್ನೂ ಅಗಲವಾಗಿ ಆನಂದತುಂದಿಲವಾಗುತ್ತದೆ.

ಸಿನಿಮಾ ಮೇಲೆ ಹಾಕಿದ ಬಂಡವಾಳ ಎಷ್ಟೆಂದು ಬಡ್ಡಿ ಸಮೇತ ಹೇಳಿಕೊಳ್ಳುವ ಅವರನ್ನು ಹತ್ತಿರದಿಂದ ಬಲ್ಲವರು ‘ಭಲಾ ನಾಟಕಕಾರ’ ಎಂದು ಕಾಲೆಳೆಯುವುದೂ ಇದೆ. ಪರಮ ಆಸ್ತಿಕರಾದ ಅವರು ಎಲ್ಲಕ್ಕೂ ಹೊಣೆಯಾಗಿಸುವುದು ದೇವರನ್ನೇ. ಅದೃಷ್ಟ ಒಲಿದಾಗ ದೇವರಿಗೆ ಹಲವು ಸೇವೆಗಳನ್ನು ಮಾಡಿಸುವ ಅವರು, ಅದೃಷ್ಟ ಕೈಕೊಟ್ಟಾಗ ಅದೇ ದೇವರನ್ನು ಬಾಯಿಗೆ ಬಂದಂತೆ ಬೈಯುತ್ತಾರೆ.

ಶಾಸ್ತ್ರ, ಸಂಪ್ರದಾಯದಲ್ಲಿ ನಂಬಿಕೆ ಇರುವ ಆ ನಟ ಸಮಯಕ್ಕೆ ತಕ್ಕಂತೆ ‘ಡ್ರಾಮಾ’ ಕೂಡ ಮಾಡಬಲ್ಲರು. ಎಷ್ಟೇ ಪ್ರತಿಭಾವಂತರಾದರೂ ಅವರಲ್ಲಿ ಹುಳುಕು ಪತ್ತೆಹಚ್ಚುವುದೂ ಗೊತ್ತು. ಯಾವುದಾದರೂ ಚಿತ್ರ ಮಾಡಿದ ಮೇಲೆ ಅದಕ್ಕೆ ಸರ್ಕಾರ ಸಬ್ಸಿಡಿ ಕೊಡಲೇಬೇಕು ಎಂಬ ಆಶಾವಾದಿ. ಆ ಹಣವನ್ನು ನಿಗದಿತ ಸಮಯಕ್ಕೆ ಮೊದಲೇ ಪಡೆಯಲು ಸರ್ಕಾರಿ ಅಧಿಕಾರಿಗಳ ಎದುರೇ ಏನಾದರೊಂದು ದುಃಖ ತೋಡಿಕೊಂಡು ಕಣ್ಣೀರಿಡುವ ಅಭ್ಯಾಸವಿದೆ. ಕಾಲ್‌ಷೀಟ್‌ಗೆ ಗಾಳ ಹಾಕಿದಂತೆಯೇ ಬರಬೇಕಾದ ಹಣ ವಸೂಲು ಮಾಡುವ ವರಸೆಗಳಲ್ಲೂ ಅವರು ಪಳಗಿದವರು. ಅವರ ಈ ಗುಣಗಳನ್ನೆಲ್ಲಾ ಅಪ್‌ಡೇಟ್ ಮಾಡಿಕೊಂಡಂಥ ಮಗ ಅಪ್ಪನ ಹಾದಿಯಲ್ಲಿಯೇ ನಡೆಯುತ್ತಿರುವುದು ಆಸಕ್ತಿಕರ ವಿದ್ಯಮಾನ!

● ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68